ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ.ಕೆಎಸ್‌ಐಸಿಪಿಎಸ್/ನೆಗ/ಚೆಂ.ನೆ-11/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:30.06.2020

## ಸುತ್ತೋಲೆ

ವಿಷಯ: ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ನಿವಾಸಿಗಳು ಮಹಡಿಯ ಮೇಲ್ಛಾವಣಿಗೆ ಹೋಗದಂತೆ ಎಚ್ಚರವಹಿಸುವ ಬಗ್ಗೆ.

ಉಲ್ಲೇಖ ಬೆಂಗಳೂರು ನಗರ ಜಿಲ್ಲೆಯಲ್ಲಿನ ಅನ್ನಪೂರ್ಣೇಶ್ವರಿ ಛಾರಿಟಬಲ್ ಟ್ರಸ್ಟ್‌ನಲ್ಲಿ ನಡೆದ ಘಟನೆಯ ಹಿನ್ನೆಲೆಯಲ್ಲಿ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಶ್ರೀ ಅನ್ನಪೂರ್ಣೇಶ್ವರಿ ಛಾರಿಟಬಲ್ ಟ್ರಸ್ಟ್‌ನಲ್ಲಿನ ನಿವಾಸಿಯು ಮಹಡಿಯ ಮೇಲ್ಛಾವಣಿಯಿಂದ ಬಿದ್ದು ಮರಣ ಸಂಭವಿಸಿದ್ದು ಪ್ರಕರಣವು ಆತ್ಮಹತ್ಯೆ ಪ್ರಕರಣವೆಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ವರದಿಸಿರುತ್ತಾರೆ.

ಆದ್ದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ನೋಂದಾಯಿಸಲ್ಪಟ್ಟ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ನಿವಾಸಿಗಳಿಗೆ ಮಹಡಿಯ ಮೇಲ್ಛಾವಣಿಗೆ ಪ್ರವೇಶವನ್ನು ಈ ಮೂಲಕ ನಿರ್ಬಂಧಿಸಲಾಗಿದೆ ಹಾಗೂ ಮೇಲ್ಛಾವಣಿಯ ಬಾಗಿಲನ್ನು ಸದಾಕಾಲ ಬೀಗ ಹಾಕಿರಬೇಕು ಮತ್ತು ಕೀಯನ್ನು ಗೃಹಪಾಲಕ/ಗೃಹಪಾಲಕಿ ಬಳಿ ಇರಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಲು ಈ ಮೂಲಕ ಸೂಚಿಸಿದೆ.

ಒಂದು ವೇಳೆ ಮೇಲ್ಛಾವಣಿಯಲ್ಲಿ ಯೋಗಾ ಇತ್ಯಾದಿ ಚಟುವಟಿಕೆಗಳನ್ನು ಮಾಡಿಸುತ್ತಿದ್ದಲ್ಲಿ ಸಂಸ್ಥೆಯ ಅಧಿಕಾರಿಗಳ ಕಟ್ಟುನಿಟ್ಟಿನ ಮೇಲ್ವಿಚಾರಣೆ ಮಾಡಿದ್ದಲ್ಲಿ ಮಾತ್ರ ಇದನ್ನು ನಡೆಸಬಹುದು. ಒಟ್ಟಾರೆ ಸಂಸ್ಥೆಯ ಅಧಿಕಾರಿಗಳ ಮೇಲ್ವಿಚಾರಣೆ ಇಲ್ಲದೇ ಮಕ್ಕಳನ್ನು ಮೇಲ್ಛಾವಣಿಗೆ ಬಿಡುವುದನ್ನು ನಿಷೇಧಿಸಲಾಗಿದೆ.

30.06.2020
ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.